ಈ) ಕಾರಣಗಳು ಈ ಕೆಳಕಂಡಂತೆ ಇವೆ:

1) ಐರಣ- ರೈಸಿಂಗ್ ಮೇನ್ ಪೈಪ್ ಒಡೆದಿರುತ್ತವೆ.

2) ಕುದರಿಹಾಳ - ವಿದ್ಯುತ್‌ಚ್ಛಕ್ತಿ ಸರಬರಾಜು ಇರುವುದಿಲ್ಲ.

3) ಚಿಕ್ಕಕುರವಟ್ಟಿ - ಪಂಪುಗಳು ದುರಸ್ತಿಯಲ್ಲಿವೆ.

4) ಮುದೇನೂರ- ವೋಲ್ಟೇಜ್ ಕಡಿಮೆ ಇರುವುದರಿಂದ ಪಂಪುಗಳು ಕೆಲಸ ಮಾಡುತ್ತಿಲ್ಲ.

5) ನದಿಹರಿಹಳ್ಳಿ - ರೈಸಿಂಗ್ ಮೇನ್ ಪಂಪುಗಳು ಒಡೆದಿರುತ್ತವೆ.

ರಾಣೆಬೆನ್ನೂರು ತಾಲ್ಲೂಕಿನಲ್ಲಿ ಮಡ್ಲೇರಿ ಹಾಗೂ ನಿಟವಳ್ಳಿ ಏತ ನೀರಾವರಿ ಯೋಜನೆಗಳು

1412 (1555) ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ತಾಲ್ಲೂಕಿನಲ್ಲಿ ತುಂಗಾಭದ್ರಾ ನದಿಯಿಂದ ಮಡ್ಲೇರಿ ಹಾಗೂ ನಿಟವಳ್ಳಿ ಏತ ನೀರಾವರಿ ಯೋಜನೆಗಳು ಬಜೆಟಿನಲ್ಲಿ ಎಂದಿನಿಂದ ಮುಂದುವರಿಯುತ್ತಾ ಬಂದಿರುತ್ತದೆ? ಯಾವ ಯಾವ ವರ್ಷದಲ್ಲಿ ಎಷ್ಟು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಆ) 2000-2001ನೇ ಸಾಲಿನಲ್ಲಿ ಈ ಯೋಜನೆಗಳಿಗೆ ಪೂರ್ತಿ ಹಣ ಬಿಡುಗಡೆ ಮಾಡಿ ಈ ಯೋಜನೆಗಳನ್ನು ಪೂರ್ತಿಗೊಳಿಸಲಾಗುವುದೆ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಮಡ್ಲೇರಿ ಏತ ನೀರಾವರಿ ಯೋಜನೆ 86-87ರಿಂದಲೂ ನಿಟವಳ್ಳಿ ಏತ ನೀರಾವರಿ ಯೋಜನೆ 99-2000 ರಿಂದಲೂ ಮುಂದುವರೆಯುತ್ತಾ ಬಂದಿದೆ.

ವಾರ್ಷಿಕವಾರು ವಿವರ ಈ ಕೆಳಕಂಡಂತೆ ಇದೆ.

ಮಡ್ಲೇರಿ ಏ.ನೀ.ಯೋ	ಆಯವ್ಯಯ ದಲ್ಲಿ ಒದಗಿಸಿದ (ಲಕ್ಷಗಳಲ್ಲಿ)	ನಿಟ್ಟವಳ್ಳಿ ಏ.ನೀ	ಆಯವ್ಯಯ ದಲ್ಲಿಒದಗಿಸಿದ (ರೂ.ಲಕ್ಷಗಳಲ್ಲಿ)
1	2	3	4
1986-87	0-30	-	-
1987-88	0-25	-	-
1988-89	-	-	-
1989-90	-	-	-
1990-91	-	-	-
1991-92	-	-	-

1	2	3	4
1992-93	-	-	-
1993-94	15.30	-	-
1994-95	3.00	-	-
1995-96	1.00	-	-
1996-97	1.00	-	-
1997-98	1.00	-	-
1998-99	0.50	-	-
1999-2000	0.01	-	0-01

ಆ) ಮಜ್ಜೇರಿ ಏತ ನೀರಾವರಿ ಯೋಜನೆ ಕಾಮಗಾರಿಯ ಈಗಿನ ಅಂದಾಜು 215.00 ಲಕ್ಷ ರೂಗಳು, ಹಾಗೂ ನಿಟವಳ್ಳಿ ಏತ ನೀರಾವರಿ ಯೋಜನೆಗೆ 248.00 ಲಕ್ಷ ರೂಗಳು ಆಗಿರುತ್ತದೆ.

ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿ ನಾಲಾ ಕೆರೆಯ ಬಗ್ಗೆ

1413 (1608) ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣೆಬೆನ್ನೂರು ತಾಲ್ಲೂಕಿನಲ್ಲಿ ಅಸುಂಡಿ ನಾಲಾ ಕೆರೆಯನ್ನು ಕಟ್ಟಲು ಎಷ್ಟು ಎಕರೆ ಭೂಮಿಯನ್ನು ರೈತರಿಂದ ಸ್ವಾಧೀನಪಡಿಸಿ ಕೊಳ್ಳಲಾಗಿದೆ; ಮತ್ತು ಎಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ;

ಆ) ಈ ರೈತರಿಗೆ ಸ್ವಾಧೀನಪಡಿಸಿಕೊಂಡ ಭೂಮಿಗಳ ಕಿಮ್ಮತ್ತಿನ ಹಣವು ಎಷ್ಟು ಸಂದಾಯ ಮಾಗಬೇಕಾಗಿದೆ;

ಇ) ಈ ಹಣವನ್ನು ಸಂದಾಯ ಮಾಡಲು ಸರ್ಕಾರಕ್ಕೆ ಕಡತವನ್ನು ಸಲ್ಲಿಸಲಾಗಿದೆಯೇ;

ಈ) ಹಾಗಿದ್ದಲ್ಲಿ , ಎಂದು ರೈತರಿಗೆ ಹಣವನ್ನು ಸಂದಾಯ ಮಾಡಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 551 ಎಕರೆ 31 ಗುಂಟೆ (223 ಹೆಕ್ಟೇರ್-23ಎ) ಕ್ಷೇತ್ರವನ್ನು ಅಸುಂಡಿ ನಾಲಾ ಕೆರೆಗಾಗಿ 1984, 1986, 1988, 1989ರಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಉಪ ವಿಭಾಗಾಧಿಕಾರಿಗಳ ಹೊರಡಿಸಿದ ತೀರ್ಪಿನ ಪ್ರಕಾರ ಇಲ್ಲಿಯವರೆಗೆ ಯಾವತ್ತೂ ಪರಿಹಾರಧನ ರೂ. 420178-00ಗಳನ್ನು ಈಗಾಗಲೇ ಸಂದಾಯ ಮಾಡಿದೆ. ಉಪವಿಭಾಗಾಧಿಕಾರಿಗಳು ನೀಡಿದ ಪರಿಹಾರ ಧನಕ್ಕೆ ತೃಪ್ತರಾಗದ ಭೂ ಹಿಡುವಳಿದಾರರು ನ್ಯಾಯಾಲಯಕ್ಕೆ ಮೊರೆಹೋದ ಪ್ರಕಾರ ನ್ಯಾಯಾಲಯವು ಭೂ ಪರಿಹಾರ ಧನವನ್ನು ಪರಿಷ್ಕರಿಸಿ ಹೊರಡಿಸಿದ ಆದೇಶಗಳ ಪ್ರಕಾರ ಇನ್ನೂ ರೂ. 2,45,85,264-00ಗಳನ್ನು ಪರಿಹಾರ ಧನ ಸಂದಾಯ ಮಾಡುವುದು ಬಾಕಿ ಇರುತ್ತದೆ.